ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Friday, the 29th February 1980/Phalguna 10, 1901

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

ಪ್ರಶ್ನೆ ಸಂಖ್ಯೆ (೩೧)

ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆಸಂಖ್ಯೆ (೧೪೩)

(ಈ ಪ್ರಶ್ನೆಗೆ ಉತ್ತರ ಕೊಡಬೇಕಾಗಿದ್ದ ಮಾನ್ಯ ಮಂತ್ರಿಗಳು ಸಭೆಯಲ್ಲಿರಲಿಲ್ಲ.)

ಶ್ರೀ ಎಸ್. ಬಂಗಾರಪ್ಪ (ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಂದಿದ್ದಾರೆ. ವಿಧಾನ ಪರಿಷತ್ತು ಈಗ ೯ ಗಂಟೆಗೆ ಸಮಾವೇಶಗೊಂಡಿದ್ದು ಅಲ್ಲೂ ಇವರ ಪ್ರಶ್ನೆ ಇದೆ, ಆದ್ದರಿಂದ ಅಲ್ಲಿ ಹೋಗಿದ್ದಾರೆ. ಬರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಜಾಸ್ತಿ ಪ್ರಮಾಣದಲ್ಲಿ ಪ್ರಶ್ನೆಗಳು ಏನಾದರೂ ಇದ್ದರೆ ನಾವು ಅವರು ಬರುವವರೆಗೆ ಕಾಯಬಹುದಾಗಿತ್ತು. ಈಗ ಸಭೆಯ ಮುಂದಿರುವುದು ಕೇವಲ ಎರಡು ಪ್ರಶ್ನೆಗಳು ಮಾತ್ರ. ಆದ್ದರಿಂದ ಅವರು ಬರುವವರೆಗೂ ಕಾಯುವುದು ಹೇಗೆ ? ಮಾನ್ಯ ಮಂತ್ರಿಗಳು ಇಲ್ಲೂ ಇರಬೇಕಾಗುತ್ತದೆ, ಆ ಮನೆಯಲ್ಲೂ ಇರಬೇಕಾಗುತ್ತದೆ, ಸಾಮಾನ್ಯವಾಗಿ ಈ ಸಭೆಗೂ ಆ ಸಭೆಗೂ ಒಂದು ಗಂಟೆ ವ್ಯತ್ಯಾಸ ಇರುತ್ತಿತ್ತು. ಆದರೆ ಇವತ್ತು ಎರಡೂ ಮನೆಗಳು ಒಂದೇ ವೇಳೆಗೆ ಸೇರಿವೆ.

ಶ್ರೀ ಎಸ್ ಬಂಗಾರಪ್ಪ.—ನಿನ್ನೆಯೂ ಬಿಸಿನೆಸ್ ಆಡ್ವೈಸರಿ ಕಮಿಟಿಯಲ್ಲಿ ಈ ವಿಷಯ ಬಂತು. ಒಂದು ಗಂಟೆ ತಡವಾಗಿ ಮೇಲ್ಮನೆ ಸೇರುವುದು ಮೊದಲಿನಿಂದ ನಡೆದು ಕೊಂಡುಬಂದ ಸಂಪ್ರದಾಯ. ಆದರೆ ಕೆಲವು ಮಸೂದೆಗಳು ೫ನೇ ತಾರೀಖಿನೊಳಗೇ ಅಲ್ಲೂ ಪಾಸ್ ಆಗಬೇಕಾಗಿರುವುದರಿಂದ ಸ್ವಲ್ಪ ಮುಂಚೆ ಸಭೆ ಸೇರಬೇಕೆಂದು ತೀರ್ಮಾನಿಸಿದ್ದಾರೆ. ಬೇರೆ ಏನೂ ಉದ್ದೇಶವಿಲ್ಲ. ಸಚಿವರು ಬಂದು ಆ ಸದನಕ್ಕೆ ಹೋಗಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳಬಹುದು. ಅಥವಾ ಬೇರೆ ಯಾವುದಾದರೂ ದಿನ ಇಟ್ಟುಕೊಳ್ಳಬಹುದು. ೫ನೇ ತಾರೀಖಿಗೆ ಹಾಕಿಕೊಂಡರೆ ಆ ದಿನ ಮಾನ್ಯ ಸದಸ್ಯರೂ ಇರುತ್ತಾರೆ ಎಂದು ಭಾವಿಸುತ್ತೇನೆ.

SRI B. B. SAYANAK.—It is better we drop the question hour. Either the Minister is not present or the member is not present.

SRI S. BANGARAPPA.—It is not that the Government wants to withhold answers to questions or Calling Attention motions and other

notices. we are also trying to avoid delay. ತಡವಾಗುವುದನ್ನು ತಪ್ಪಿಸಬೇಕು ಎಂದು ಸರ್ಕಾರವೂ ಪ್ರಯತ್ನಿಸುತ್ತಿದೆ. ಇದನ್ನು ನಾವೂ ಸಹಿಸುವುದಿಲ್ಲ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಕೂಡಲೇ ಉತ್ತರಗಳನು ಸರಬರಾಜು ಮಾಡಬೇಕೆಂದು ಈಗಾಗಲೇ ಎಲ್ಲಾ ಇಲಾಖೆಗಳಿಗೂ ತಿಳಿಸಿದ್ದೇವೆ.

MR. SPEEKER.—The questions are held over

Question for Answers on the Day
(But not taken up)

Allotment of Lands to Freedom Fighters

31 SRI B. V. RAMACHANDRA REDDY (Varthur).—Will the Minister for Revenue be pleased to state :—

(a) whether it is a fact that land was granted to the freedom fighters within the jurisdiction of Bangalore Development Authority near Yarappanna Village, Bidarahalli Hobli of Hosakote Taluk ; if so, the number of acres ;

(b) the names and number of persons to whom the Land was granted and the extent of land got by each person ;

(c) whether it has come to the notice of the Government that some of the persons who have got lands belong to one and the same family ;

(d) whether the land distributed comes under green belt ;

(e) whether Government has given permission for conversion of the said land ;

( ) whether Government is again purchasing such converted land from freedom fighters at present on payment basis ;

(g) whether Government is making efforts to get back the said land from the grantees which was granted to them free of cost and if so, the amount to be given thereon. The amount of compensation to be paid by Government per square or acre in this behalf ;

(h) the estimated cost of the land existing there at present ?

SRI S. BANGARAPPA (Minister for Revenue and Agriculture).—

(a) Yes. Totally 230 acres of land was sanctioned.

(b) 23 persons were granted. The details in respect of names of persons and the extent of land granted to them is given in the statement appended.

(c) It has not come to the notice of the Government.